ಅಮಾಸ್ ಪುನ್ನೀಮ್ನಲ್ಲಿ ಥೇಟ್ ನಾಯಿ ಥರ ಕೂಗಬಹುದೇನಪ್ಪ" ಎಂಬ ಪುಕಾರನ್ನೂ ಹುಟ್ಟು ಹಾಕಿದ. ಅಷ್ಟರಲ್ಲಿ ನಮ್ಮ ರಂಪಾಟ ನೋಡಿ ಬಂದ ಬೀದಿಯೋರು ನಮಗೆಲ್ಲಾ ಓಡಿಸಿ ಜಾವೀದನನ್ನು ಎಳೆದುಕೊಂಡು ಹೋದರು. ಅರಸೀಕೆರೆಯ ಹತ್ತಿರ ಹುಚ್ಚುನಾಯಿ ಕಡಿತಕ್ಕೆ ಔಷಧಿ ಕೊಡುವ ಪಂಡಿತನೊಬ್ಬನ ಹತ್ತಿರ ಸುಟ್ಟ ಇಟ್ಟಿಗೆಯಲ್ಲಿ ಆ ಗಾಯವನ್ನು ಸುಡಿಸಿದರೆಂದು ಗೊತ್ತಾಯಿತು. ಕಾಲಿಗೆ ಸಣ್ಣ ಬಿದಿರ ದಬ್ಬೆಯ ಬ್ಯಾಂಡೇಜ್ ಕಟ್ಟಿಸಿಕೊಂಡಿದ್ದ ಜಾವೀದ ಕುಂಟುಕೊಂಡೆ ನಮ್ಮ ಜೊತೆಗೆ ಆಟವಾಡುತ್ತಿದ್ದ. "ಅವನ ಎಂಜಿಲನ್ನು ಅಪ್ಪಿತಪ್ಪಿಯೂ ಇಸ್ಕೊಂಡು ತಿನ್ನಬೇಡಿ" ಎಂದು ನಮ್ಮ ಅವ್ವಂದಿರು ಗುಟ್ಟಾಗಿ ಮಾಡಿದ್ದ ತಾಕೀತನ್ನು ಅವನಿಗೆ ತಿಳಿಸದೆ ಜೋಪಾನ ಮಾಡಿಟ್ಟುಕೊಂಡೆವು.

ಅಮವಾಸೆ ಹುಣ್ಣಿಮೆ ಬಂದಾಗ ತಪ್ಪದೆ ಓಡಿ ಹೋಗಿ ಜಾವೀದನ ಮುಖವನ್ನೇ ನೋಡುತ್ತಾ ಕೂರುತ್ತಿದ್ದೆವು. ಅವನು ನಾಯಿಯಂತೆ ಯಾವಾಗ ಕೂಗುತ್ತಾನೆಂದು ನಿರೀಕ್ಷಿಸುತ್ತಿದ್ದೆವು. ಅವನ ತೇಗು ಕೆಮ್ಮುಗಳಲ್ಲೂ ನಾಯಿಯ ಕೂಗಿನ ಪರಿಛಾಯೆ ಇದೆಯಾ ಎಂದು ಚೆಕ್ ಮಾಡುತ್ತಿದ್ದೆವು. ಕೊನೆ ತನಕವೂ ನಾಯಿಯಂತೆ ಕೂಗಲಾಗದ ಜಾವೀದ್ ನಮಗೆಲ್ಲಾ ನಿರಾಸೆ ಮೂಡಿಸುತ್ತಿದ್ದ. ಅವನಿಗಿಂತಲೂ ಅವನನ್ನು ಲಘುವಾಗಿ ಕಚ್ಚಿದ ಆ ನಾಯಿಯ ಬಗ್ಗೆಯೇ ನಮಗೆಲ್ಲಾ ತಿರಸ್ಕಾರದ ಭಾವನೆ ಮೂಡಿತು. 'ಅಂಥ ಸುಡುಗಾಡು ನಾಯಿ ಇದ್ದರೆಷ್ಟು ಸತ್ತರೆಷ್ಟು' ಎಂದು ಶಪಿಸಿಕೊಂಡೆವು.

ನಾನು ಗಮನಿಸಿರುವಂತೆ ಮುಸ್ಲಿಮರು ನಾಯಿಗಳನ್ನು ಸಾಕುವುದಿಲ್ಲ. ಇಲಿ ಹಿಡಿದು ಉಪಕಾರ ಮಾಡುವ ಬೆಕ್ಕುಗಳನ್ನಷ್ಟೆ ಸಾಕುತ್ತಾರೆ. ಸಾಕಿದವರ ಮಾನ ಪ್ರಾಣ ಕಾಪಾಡಿರುವ ನಾಯಿಗಳಿಗೆ ವಿಶಿಷ್ಟ ಸ್ಥಾನಮಾನವಿದೆ. ಕೆಲವರಂತೂ ತಮ್ಮ ಮಕ್ಕಳಿಗಿಂತ ಹೆಚ್ಚಾಗಿ ಅವುಗಳನ್ನು ಪ್ರೀತಿಸಬಲ್ಲರು. ನಾಯಿಗಳ ಪ್ರಾಣ ತ್ಯಾಗಕ್ಕೆ ದಾನದತ್ತಿ ಕೊಟ್ಟ, ಶಾಸನಗಳನ್ನು ಕೆತ್ತಿಸಿದ ಉದಾಹರಣೆಗಳು ನಮ್ಮಲ್ಲಿವೆ. ಆದರೆ ಈ ಸೌಭಾಗ್ಯವನ್ನು ಬೀದಿ ನಾಯಿಗಳು ಪಡೆದುಕೊಂಡು ಬಂದಿರುವುದಿಲ್ಲ.

ಬೆಂಗಳೂರಿನಲ್ಲಿರುವ ನನ್ನ ಗೆಳೆಯ ನೂರ್ ಅಹಮ್ಮದ್ ಒಂದು ರಾತ್ರಿ ನನ್ನನ್ನು ಬೈಕಿನಲ್ಲಿ ಕೂರಿಸಿಕೊಂಡು ಹೊರಟಿದ್ದ. ತಿಂಡ್ಲು ಹತ್ತಿರ ಅವನ ಮನೆಯಿತ್ತು. ದಾರಿಯಲ್ಲಿ ಮಲಗಿದ್ದ ಹತ್ತಾರು ನಾಯಿಗಳು ಒಂದೇ ಸಲಕ್ಕೆ ಬೌಗುಡುತ್ತಾ ಮಿಂಚಿನಂತೆ ನಮ್ಮ ಮೇಲೆ ದಾಳಿ ಮಾಡಿದವು. ಹಿಂದೆ ಕುಳಿತಿದ್ದ ನನ್ನ ಕಾಲು ಕಚ್ಚಲು ಸ್ಪರ್ಧೆಗೆ ಬಿದ್ದಂತೆ ಹಾರಿದವು. ಕಂಗಾಲಾದ ನಾನು "ಹಛಾ, ಹಛ್" ಎಂದು ಕಿರುಚಾಡಿದೆ. ಇದ್ಯಾವುದನ್ನು ನಿರೀಕ್ಷಿಸದೆ ಆರಾಮಾಗಿ ಗಾಡಿ ಚಲಾಯಿಸುತ್ತಿದ್ದ ನೂರ್ ಸಡನ್ನಾಗಿ ಆದ ಅಘಾತಕ್ಕೆ ಹೆದರಿ ಹ್ಯಾಂಡಲ್ ತಿರುಗಿಸಿ ಬಿಟ್ಟ. ಇಬ್ಬರೂ ರಾಚಿಕೊಂಡು ಬಿದ್ದೆವು. ಪೆಟ್ಟುಗಳು ಸರಿಯಾಗೇ ಬಿದ್ದಿದ್ದವು. ನಾವು ಬಿದ್ದ ನಂತರ ತಕ್ಷಣ ನಿರುತ್ಸಾಹಗೊಂಡ ನಾಯಿಗಳು ತಮಗೇನು ಸಂಬಂಧವೇ ಇಲ್ಲವೆನ್ನುವಂತೆ ನಮ್ಮನ್ನು ಮೂಸಿಯೂ ನೋಡದೆ ಹೊರಟೇ ಹೋದವು.

ಎದ್ದು ಸವಾರಿಸಿಕೊಂಡ ಮೇಲೆ ನೂರ್, "ಕಲೀಮ್ ನೀವು ನಾಯಿಗಳಿಗೆ 'ಹ್ಯಾಕ್ ಥೂ' ಎಂದು ಕ್ಯಾಕರಿಸಿ ತುಪ್ಪಬೇಕಿತ್ತು. ಹೀಗೆ ಉಗಿದರೆ ಅವು ಮನಸ್ಸಿಗೆ ಬೇಜಾರು ಮಾಡ್ಕೊಂಡು ಹೋಗಿ ಬಿಡ್ತಾವೆ. ನೀವು ಹಛಾ, ಹಛ್ ಎಂದರೆ ಅವು ಇನ್ನೂ ಸಿಟ್ಟಾಗುತ್ತವೆ" ಎಂದು ಹೊಸ ನಾಯಿಯ ಸಿದ್ಧಾಂತವೊಂದನ್ನು ಊದಿದ. "ಇದು ಬೆಂಗಳೂರಿನ ನಾಯಿಗಳಿಗೆ ಮಾತ್ರವೋ ಜಗತ್ತಿನ ಎಲ್ಲಾ ನಾಯಿಗಳು ಅನ್ವಯಿಸುತ್ತದೆಯೋ?" ಎಂದು ಕೇಳಿದೆ. "ನಾನು ಸದ್ಯ